

## ಬ್ರಹ್ಮ ಮಂದಿರ

ಇಡೀ ವಿಶ್ವದಲ್ಲಿ ಭಾರತದ ರಾಜಸ್ಥಾನ ರಾಜ್ಯದ ಅಜ್ಮೀರ್ ಜಿಲ್ಲೆಯ ಪುಷ್ಕರ್‌ನಲ್ಲಿ ಮಾತ್ರ ಬ್ರಹ್ಮ ದೇವರ ಮಂದಿರವಿದೆ ಎಂದು ಹೇಳಲಾಗುತ್ತದೆ. ಆದರೆ ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಹೊಸಹಳ್ಳಿ ಗ್ರಾಮದಲ್ಲಿ ಇಂದಿಗೂ ಬ್ರಹ್ಮ ದೇವರ ಮಂದಿರವಿದ್ದು ಪೂಜಿಸಲಾಗುತ್ತಿದೆ.

**-ಎನ್.ಎಸ್. ಅಶ್ವಿನಿ ಸಂತೋಷ್, ಚಿತ್ರದುರ್ಗ**

## ಪಿಂಚಿ ಆಕಾರದ ಕಟ್ಟಡ

ಬೆಂಗಳೂರು– ತುಮಕೂರು ರಸ್ತೆಯ ಪಕ್ಕ ತುಮಕೂರಿನಿಂದ 5 ಕಿ.ಮೀ. ದೂರದ ಮಂದರಗಿರಿ (ಬಸದಿ ಬೆಟ್ಟ) ಸ್ಥಳದಲ್ಲಿರುವ ಈ ಕಟ್ಟಡ ಪಿಂಚಿ ಆಕಾರದಲ್ಲಿದೆ. ಜೈನ ಮುನಿಗಳ ಕೈಯಲ್ಲಿ ನವಿಲುಗರಿಗಳಿಂದ ನಿರ್ಮಿಸಲಾಗುವ ಪಿಂಚಿ (ಬೀಸಣಿಕೆ) ಆಕಾರದಲ್ಲಿ ಈ ಕಟ್ಟಡವನ್ನು ನಿರ್ಮಿಸಲಾಗಿದೆ. 60 ಅಡಿ ಎತ್ತರವಿರುವ ಈ ಕಟ್ಟಡ ತನ್ನ ವಿಶಿಷ್ಟ ವಾಸ್ತುವಿನಿಂದ ಲಿಮ್ಕಾ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲಾಗಿದೆ. ಇದರ ಒಳಗಡೆ ಜೈನ ಮುನಿಗಳ ಜೀವನ ಸಾರುವ ಕಲಾಕೃತಿ, ಧ್ಯಾನ ಮಂದಿರವಿದೆ.

**-ಕೆ.ಜಿ. ಮಂಜುಳ ವಿಠಲರಾವ್, ಚಿತ್ರದುರ್ಗ**





## ಊಟಕ್ಕೂ ಸೈ... ನೋಟಕ್ಕೂ ಸೈ...!

ಹಿಂದೆ ಬಣ್ಣ ಬಣ್ಣದ ಗೂಡು ದೀಪಗಳನ್ನು ನೋಡಲು ದೀಪಾವಳಿ ಹಬ್ಬವನ್ನು ಕಾಯಬೇಕಿತ್ತು. ಆದರೆ ಈಗ ಹಾಗಲ್ಲ. ಸಾಹಿತ್ಯ ಸಮ್ಮೇಳನ, ನುಡಿಸಿರಿ ಎಂಬ ಎಲ್ಲ ದೊಡ್ಡ ಜನಜಾತ್ರೆಗಳಲ್ಲಿ ಅಲಂಕಾರಕ್ಕಾಗಿ ಗೂಡು ದೀಪಗಳು ಬಳಕೆಯಾಗುತ್ತವೆ.

ಮಂಗಳೂರಿಗೆ ಸಮೀಪದ ಸುಂಕದಕಟ್ಟೆಯಲ್ಲಿ ವ್ಯಾಪಾರ ಮಾಡುತ್ತಿರುವ ಜಗದೀಶ ಕೆ. ಅಮೀನ್ ಅವರಿಗೆ ಬಾಲ್ಯದಿಂದಲೂ ಗೂಡು ದೀಪ ರಚಿಸುವ ಹವ್ಯಾಸ. ಬೇರೆ ಬೇರೆ ವಸ್ತುಗಳನ್ನು ಬಳಸಿ ತಯಾರಿಸಿದ ಹತ್ತಕ್ಕೂ ಹೆಚ್ಚಿನ ವಿನ್ಯಾಸಗಳಿವೆ. ವೀಳ್ಯದೆಲೆ, ಕಾಯಿಮೆಣಸು, ಲಿಂಬೆಹಣ್ಣುಗಳ ಸಂಕಲನದಿಂದ ಹಸಿರಾದ ಗೂಡು ದೀಪ, ಭತ್ತದ ಕಾಳುಗಳು ಹಾಗೂ ಬೈಹುಲ್ಲುಗಳನ್ನು ಅಂಟಿಸಿ ವಾರ್ನಿಷ್ ಕೊಟ್ಟ ಗೂಡುದೀಪ ಫಳ ಫಳ ಹೊಳೆಯುತ್ತಾ ಗಾಳಿಗೆ ಉಯ್ಯಾಲೆಯಾಡುತ್ತವೆ. ಸೊಪ್ಪು ತರಕಾರಿ ಬಸಳೆ ಹಾಗೂ ಕಾಲಿಫ್ಲವರ್ ಬಳಸಿ ನಿರ್ಮಿಸಿದ ಈ ಗೂಡು ದೀಪವನ್ನು ಪ್ರದರ್ಶನದ ನಂತರ ಎಸೆಯುವ ಬದಲು ಚೆನ್ನಾಗಿ ತೊಳೆದರೆ ರುಚಿಕಟ್ಟಾದ ಬಸಳೆ ಸಾಂಬಾರ್ ಮಾಡಿ ಹೊಟ್ಟೆ ತುಂಬಾ ಉಣ್ಣಬಹುದು.

**ಚಿತ್ರ- ಬರಹ: ಡಾ. ವೇಣುಗೋಪಾಲ ಶರ್ಮಾ, ಗುರುವಾಯನಕೆರೆ**